CC No.677/2023
CW-4  PW-3

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ.  677/2023**

| | | |
|---|---|---|
| **ಹೆಸರು** | :- | **ಜಾನಕಮ್ಮ** |
| **ಗಂಡನ ಹೆಸರು** | :- | **ರಂಗಪ್ಪ** |
| **ವಯಸ್ಸು** | :- | **45 ವರ್ಷ** |
| **ಉದ್ಯೋಗ** | :- | **ಮನೆ ಕೆಲಸ** |
| **ಸ್ಥಳ** | :- | **ಓಟೂರು** |

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಚಾಸಾ-1, 5 ಮತ್ತು 6 ನನ್ನ ಮಕ್ಕಳಾಗಿರುತ್ತಾರೆ. ಚಾಸಾ-7 ನನ್ನ ಮೈದುನನ ಮಗಳು. ಚಾಸಾ-8 ನನ್ನ ಅತ್ತೆಯ ತಂಗಿ. ಚಾಸಾ-9 ಮತ್ತು 10 ನನ್ನ ಮೈದುನರಾದ ಕೃಷ್ಣಮೂರ್ತಿ ಮತ್ತು ರವಿಕುಮಾರ ರವರ ಹೆಂಡತಿಯರಾಗಿರುತ್ತಾರೆ. ಚಾಸಾ-1 ನನ್ನ ಮಗ ಈಗ ಮೃತ ಹೊಂದಿರುತ್ತಾರೆ. ಸುಮಾರು ಮೂರು ವರ್ಷಗಳ ಹಿಂದೆ ರಾತ್ರಿ 8.00 ರ ಸಮಯದಲ್ಲಿ ಓಟೂರು ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿದ್ದಾಗ ಆರೋಪಿತರು ಬಂದು ನಮ್ಮನ್ನು ಹೊಡೆದು ಚಾಸಾ-7 ರವರ ಕೈ ಹಿಡಿದು ಎಳೆದಾಡಿರುತ್ತಾರೆ. ನಮ್ಮ ಗದ್ದೆಗಾಗಿ ತೊಂದರೆ ಕೊಡುತ್ತಿದ್ದಾರೆ. ಹಿಂದಿನ ಮತ್ತು ಮುಂದಿನ ಬಾಗಿಲನ್ನು ಮುರಿದಿರುತ್ತಾರೆ. ಆರೋಪಿತರು ಚಾಸಾ-1 ಮತ್ತು 5 ರವರಿಗೆ ಹಲ್ಲೆ

ಮಾಡಿರುತ್ತಾರೆ. ಮನೆಯಲ್ಲಿದ್ದ ಸಾಮಾನುಗಳನ್ನು ಎಸೆದಿರುತ್ತಾರೆ. ಕಲ್ಲುಗಳನ್ನು ಬಿಸಾಕಿರುತ್ತಾರೆ. ಆರೋಪಿತರು ಎಲ್ಲರೂ ಹಿಂಸೆ ನೀಡಿರುತ್ತಾರೆ. ಆ ದಿನ ಹಲ್ಲೆಗೆ ಒಳಗಾದ ನಾನು, ಚಾಸಾ-1, 5 ರಿಂದ 10 ರವರು ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನನ್ನನ್ನು ಪೊಲೀಸರು ಈ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ನಾನು ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು**).

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ</u>**

ಸದರಿ ಗಲಾಟೆಯು ದಿಃ 21.06.2022 ರಂದು ಆಗಿರುತ್ತದೆ ಅಂದರೆ ಸರಿ. ಸ.ನಂ.8 ರ ಜಮೀನಿನಲ್ಲಿ ಎತ್ತನ್ನು ಮೇಯಿಸುತ್ತಿದ್ದೀಯಾ ಎಂಬ ವಿಚಾರವಾಗಿ ರಾತ್ರಿ 8.30 ಕ್ಕೆ ಗಲಾಟೆ ಮಾಡಿರುತ್ತಾರೆ ಅಂದರೆ ಸುಳ್ಳು. ಆಗ ನಾನು, ಮೃತ ಚಾಸಾ-1, 4 ರಿಂದ 10 ರವರು ಮನೆಯಲ್ಲಿದ್ದಾಗ ಆರೋಪಿತರು ಗಲಾಟೆ ಮಾಡಿರುತ್ತಾರೆ ಅಂದರೆ ದೋಷಾರೋಪಣೆ ಪಟ್ಟಿಯಿಂದ ಕೈ ಬಿಟ್ಟ ಸಂತೋಷ ಸಹ ಇರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿತರು ಎಲ್ಲರೂ ಮನೆ ಒಳಗೆ ನುಗ್ಗಿ ಮಿಂಡ್ರಿ ಮಕ್ಕಳು, ಸೂಳೇ ಮಕ್ಕಳು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಅಂದರೆ ಸರಿ. ನನ್ನನ್ನು ಮತ್ತು ಚಾಸಾ-5 ರಿಂದ 10 ರವರನ್ನು ಎಳೆದಾಡಿ ಹೊಡೆದಿರುತ್ತಾರೆ. ಇನ್ನೊಂದು ಸಲ ಜಮೀನು

ವಿಷಯಕ್ಕೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ.ಪಿ.ಎಸ್.ಕೆ. ವಕೀಲರಿಂದಃ**

ನನ್ನ ಮತ್ತು ಆರೋಪಿತರ ನಡುವೆ ಜಮೀನು ವಿಚಾರವಾಗಿ ಇದೇ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣ ಇದೆ ಅಂದರೆ ಸರಿ. ಸ.ನಂ.8 ಅರಣ್ಯ ಜಮೀನು ಅಂದರೆ ಸಾಕ್ಷಿಯು ನನಗೆ ಜಮೀನು ಮಂಜೂರು ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಸ.ನಂ.8 ಮತ್ತು 330 ಅಕ್ಕ ಪಕ್ಕ ಅಂದರೆ ಸರಿ. ಸ.ನಂ.330 ನ್ನು 12 ನೇ ಆರೋಪಿ ದೇವಮ್ಮ ಖರೀದಿಸಿದ ಸ್ವತ್ತು ಅಂದರೆ ಸುಳ್ಳು. ಇದೇ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ ಅಂದರೆ ಸರಿ. ಇದೇ ಸರ್ವೆ ನಂಬರಿಗೋಸ್ಕರ ನಮ್ಮ ಮತ್ತು ಆರೋಪಿತರ ಮಧ್ಯೆ ವೈಷಮ್ಯ ಇದೆ ಅಂದರೆ ಸರಿ. ಇದೇ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಸಿ.ಸಿ.ನಂ.134/2020 ಹಾಗೂ ಸಿ.ಸಿ.ನಂ.678/2023 ನನ್ನ ಮೇಲೆ ಪ್ರಕರಣಗಳು ದಾಖಲಾಗಿವೆ ಅಂದರೆ ಸರಿ. ದಿಃ 21.06.2022 ರಂದು ರವಿ ಮತ್ತು ಕೃಷ್ಣಪ್ಪ ರವರು ಸ.ನಂ.330 ರಲ್ಲಿ ಎತ್ತುಗಳನ್ನು ಮೇಯಿಸಲು ಬಿಟ್ಟು ಬಾಳೆ ಗಿಡಗಳನ್ನು ತೆಗೆಯುತ್ತಿದ್ದರು ಅಂದರೆ ಸುಳ್ಳು. 1 ರಿಂದ 8 ನೇ ಆರೋಪಿತರ ಜಮೀನಿನಲ್ಲಿ ಎತ್ತು ಯಾಕೆ ಮೇಯಿಸುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನಾನು, ನನ್ನ ಗಂಡ ರಂಗನಾಥ, ಬಲೀಂದ್ರ, ಚಾಸಾ-1, ಚಾಸಾ-5 ರಿಂದ 10 ರವರು ಆರೋಪಿತರ ಮೇಲೆ ಹಲ್ಲೆ ಮಾಡಿದ್ದರು ಅಂದರೆ ಸುಳ್ಳು. ನಾನು ಆರೋಪಿತರ ಮೇಲೆ ಹಲ್ಲೆ ಮಾಡಿದ್ದಕ್ಕೆ ಅವರು ದೂರು ನೀಡಿದ್ದು,

ಅದಕ್ಕೆ ನಾನು ಅವರ ಮೇಲೆ ಈ ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ಆ ದಿನ ನಾನು ಗಲಾಟೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**